ಸುಳ್ಳು ಹೇಳುವವರನ್ನು ಯಾರೂ ನಂಬುವುದಿಲ್ಲ. ಅವರಿಗೆ ಈ ಲೋಕದಲ್ಲಿಯೂ ಸಂತೋಷವಿಲ್ಲ, ಪರಲೋಕದಲ್ಲಿಯೂ ಸ್ಥಾನವಿಲ್ಲ. ಆದ್ದರಿಂದ ಮಾತನಾಡಬೇಕಾದರೆ, ಸತ್ಯವಾಗಿಯೂ, ಪ್ರಿಯವಾಗಿಯೂ, ಮಿತವಾಗಿಯೂ, ಹಿತವಾಗಿಯೂ ಮಾತನಾಡಬೇಕು. ಎಲ್ಲರಿಂದಲೂ ವಿಶ್ವಾಸ ಗಳಿಸಬೇಕು. ಮತ್ತೊಬ್ಬರನ್ನು ವಂಚಿಸದೆ, ಜವಾಬ್ದಾರಿಯನ್ನು ಅರಿತು, ಕರ್ತವ್ಯಚ್ಯುತನಾಗದೆ, ವ್ಯರ್ಥವಾಗಿ ಕಾಲಹರಣ ಮಾಡದೆ, ಗುರುಹಿರಿಯರ ಅಭಿಪ್ರಾಯ ತಿಳಿದು ಕೆಲಸಮಾಡುತ್ತ, ಅವರ ಆವಶ್ಯಕತೆಗಳನ್ನು ಪೂರೈಸುವವನು 'ವಿಶ್ವಾಸಪಾತ್ರ' ಎನಿಸಿಕೊಳ್ಳುತ್ತಾನೆ. ಆದ್ದರಿಂದ ಪ್ರತಿ ಕೆಲಸವನ್ನೂ ನಿಸ್ವಾರ್ಥತೆಯಿಂದ, ಸೇವಾಮನೋಭಾವದಿಂದ ಮಾಡಲು ಯತ್ನಿಸಬೇಕು.

ವಿದ್ಯಾರ್ಥಿಗಳ ಭೌತಿಕ, ಬೌದ್ಧಿಕ, ವ್ಯಾವಹಾರಿಕ, ಸಾಮಾಜಿಕ, ಧಾರ್ಮಿಕ, ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿ ಉಂಟಾಗುವಂತೆ, ಅವರಲ್ಲಿ ಸಭ್ಯತೆ, ಶಿಷ್ಟಾಚಾರ, ವಿನಯ, ಸೇವಾಮನೋಭಾವ, ಸಂಯಮ, ಬಲ, ತೇಜಸ್ಸು, ಸದ್ಗುಣ, ಸನ್ನಡತೆ, ವಿವೇಕ, ಜ್ಞಾನವೃದ್ಧಿ ಮತ್ತು ಬುದ್ಧಿಮತ್ತೆ ಹೆಚ್ಚುವಂತಹ, ಉತ್ತಮ ಶಿಕ್ಷಣ ದೊರೆಯುವಂತಹ ಪುಸ್ತಕಗಳನ್ನು ಓದಲು ಅವರನ್ನು ಪ್ರೋತ್ಸಾಹಿಸಬೇಕು.

### ಬ್ರಹ್ಮಚರ್ಯ ಪಾಲನೆ

'ಬ್ರಹ್ಮಚರ್ಯ' ಶಬ್ದದ ನಿಜವಾದ ಅರ್ಥ ನಿರಂತರವಾಗಿ ಬ್ರಹ್ಮವನ್ನು ಕುರಿತು ಚಿಂತನೆ ಮಾಡುವುದು ಎಂದು. ಪರಬ್ರಹ್ಮವಸ್ತುವನ್ನು ಸದಾ ಮನನ ಮಾಡುವವನೇ ಬ್ರಹ್ಮಚಾರಿ! ಇದಕ್ಕೆ ಅವಶ್ಯವಾದ ಶರೀರ, ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಶಕ್ತಿಗಳು ವೀರ್ಯರಕ್ಷಣೆಯಿಂದ ಅಭಿವೃದ್ಧಿ ಹೊಂದುತ್ತವೆ. ಎಲ್ಲ ರೀತಿಯಿಂದಲೂ ವೀರ್ಯಶಕ್ತಿಯನ್ನು ಕಾಪಾಡಿಕೊಳ್ಳುವುದನ್ನೇ 'ಬ್ರಹ್ಮಚರ್ಯ ವ್ರತಪಾಲನೆ' ಎಂದು ಕರೆಯಬಹುದು. ವಿದ್ಯಾರ್ಥಿಗಳು ಇದಕ್ಕೆ ಧಕ್ಕೆ ತರುವಂತಹ ಯಾವುದೇ ಕಾರ್ಯವನ್ನೂ, ಸಹವಾಸವನ್ನೂ ಮಾಡಬಾರದು.

ಇತ್ತೀಚಿನ ಚಲನಚಿತ್ರಗಳಲ್ಲಿ ಅಸಭ್ಯ ಮತ್ತು ಅಸಹ್ಯ ಚಿತ್ರಗಳೇ ಹೆಚ್ಚು. ಇವನ್ನು ವಿದ್ಯಾರ್ಥಿಗಳು ನೋಡುವುದರಿಂದ ಅವರ ಮನಸ್ಸು ಉದ್ರೇಕಗೊಂಡು, ಕೆಟ್ಟದಾರಿಗೆ ಬೀಳುತ್ತಾರೆ. ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಲಾಗದೆ, ತಮ್ಮ ಕರ್ತವ್ಯವನ್ನು ಮರೆಯುತ್ತಾರೆ. ಆದ್ದರಿಂದ ಅವುಗಳಿಂದ ದೂರ ಇರುವುದೇ ಒಳ್ಳೆಯದು. ಹಾಗೆಯೇ ಈ ಚಲನಚಿತ್ರಗಳಿಗೆ ಸಂಬಂಧಿಸಿದ ಜಾಹೀರಾತು, ಸಾಹಿತ್ಯಗಳ ಕಡೆ ವಿದ್ಯಾರ್ಥಿಗಳು ಗಮನ ಹರಿಸಬಾರದು. ಇವುಗಳಿಂದ ಶರೀರ ಮತ್ತು ಮನಸ್ಸಿನ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಬದುಕು ಹಾಳಾಗುವ ಸಂಭವವೂ ಉಂಟು.

ಹಾಗೆಯೇ ವಿದ್ಯಾರ್ಥಿಗಳು ಭೋಗಜೀವನದಿಂದ ದೂರ ಇರಬೇಕು. ಹಿಂಸೆ, ದ್ರೋಹ, ಹೊಟ್ಟೆಕಿಚ್ಚು, ಸುಳ್ಳು–ಮೋಸ, ಕಳ್ಳತನ, ವಿಶ್ವಾಸದ್ರೋಹ, ಕಾಮ, ಕ್ರೋಧ, ಲೋಭ, ಮೋಹಗಳನ್ನು ಸರ್ವಥಾ ತ್ಯಜಿಸಬೇಕು. ಹಾಗಿಲ್ಲದವರನ್ನು ಸಮಾಜ ನಂಬುವುದಿಲ್ಲ, ತಿರಸ್ಕರಿಸುತ್ತದೆ.

### ತಂದೆ–ತಾಯಿಯರ ಸೇವೆ

ವಿದ್ಯಾರ್ಥಿಗಳು ಅತ್ಯಂತ ಅವಶ್ಯವಾಗಿ ಮಾಡಬೇಕಾದುದೆಂದರೆ ತಂದೆ–ತಾಯಿಗಳ ಸೇವೆ. ಇದರಿಂದ ಲಾಭವುಂಟು. ಇದನ್ನು ಮಾಡದಿದ್ದರೆ ಹಾನಿಯುಂಟಾಗುತ್ತದೆ. ತಂದೆತಾಯಿಗಳಿಗೆ ಎಷ್ಟೇ ವಯಸ್ಸಾಗಿದ್ದರೂ, ಅವರಿಗೆ ಮಕ್ಕಳು, ಮಕ್ಕಳೇ ತಾನೇ! ಹೀಗಾಗಿ ಅವರು ದೇಹತ್ಯಾಗ ಮಾಡುವವರೆಗೂ ತನು, ಮನ, ಧನಗಳಿಂದ ಅವರಿಗೆ ಹಿತವಾಗುವಂತೆ ಸೇವೆ ಮಾಡಲೇಬೇಕು. ಅವರ ಮನಸ್ಸಿನ ಇಚ್ಛೆಯನ್ನು ಪೂರೈಸಬೇಕು. ಬಾಲ್ಯದಿಂದ ಪೋಷಿಸಿ, ವಿದ್ಯಾಭ್ಯಾಸ ಮಾಡಿಸಿ, ಸದ್ಗೃಹಸ್ಥರನ್ನಾಗಿಯೂ, ಸತ್ಪ್ರಜೆಗಳನ್ನಾಗಿಯೂ ಮಾಡುವ ನಿಟ್ಟಿನಲ್ಲಿ ಅವರು ಅನೇಕ ಕಷ್ಟ–ಕಾರ್ಪಣ್ಯಗಳನ್ನು ಅನುಭವಿಸಿರುತ್ತಾರೆ. ತಮ್ಮ ನಂತರ ತಾವು ಗಳಿಸಿದ್ದ ಆಸ್ತಿ–ಪಾಸ್ತಿಗಳನ್ನೆಲ್ಲ ಮಕ್ಕಳಿಗೇ ಬಿಟ್ಟುಹೋಗುತ್ತಾರೆ. ಇಂತಹ ದೈವೀಸಮಾನರಾದ ತಂದೆತಾಯಿಗಳನ್ನು ತಿರಸ್ಕರಿಸುವುದಾಗಲಿ, ಸೇವೆ ಮಾಡದೆ ಇರುವುದಾಗಲಿ ಕೂಡದು. ಅದು ಪಾಪ. 'ಪದ್ಮಪುರಾಣ'ದ ಭೂಮಿಕಾಖಂಡವು "ಅಂಗಹೀನರು, ದೀನರೂ, ದುಃಖಿಗಳೂ, ರೋಗಪೀಡಿತರೂ ಆದ ತಂದೆತಾಯಿಯರನ್ನು ತ್ಯಜಿಸುವ ಪಾಪಿಗಳು ನರಕಕ್ಕೆ ಹೋಗುತ್ತಾರೆ" ಎಂದು ಹೇಳುತ್ತದೆ.

**ಆದ್ದರಿಂದ ಯುವಕ, ಯುವತಿಯರಲ್ಲಿ ವಿನಮ್ರ ನಿವೇದನೆ ಏನೆಂದರೆ, ನಿಷ್ಕಾಮಭಾವದಿಂದ, ಯೋಗ್ಯ ಸಾಧನೆಗಳಿಂದ ನಿಮ್ಮ ಜೀವನದ ಮಟ್ಟವನ್ನು ಉನ್ನತಿಯತ್ತ ಏರಿಸಲು ಪ್ರಯತ್ನಿಸಿ. ಯಾವ ಕಾರಣದಿಂದಲೂ ಅನೈತಿಕತೆಯ ಅಧಃಪತನದತ್ತ ಜಾರದಿರಿ!**

**ಕೃಪೆ: 'ಕಲ್ಯಾಣ್' ಹಿಂದಿ ಮಾಸಪತ್ರಿಕೆ**
(ಅನುವಾದ: ಸಿ.ಎಸ್. ಮಂಗಳಮ್ಮ)